KACM210046242024

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,

ಕಡೂರು.

ದಿನಾಂಕ 1 ನೇ ಆಗಸ್ಟ್ ಮಾಹೆ 2026

:: ಉಪಸ್ಥಿತರು ::

ಶ್ರೀ ಡಿ. ಕೆ. ಮಂಜುನಾಥ ಚಾರಿ

ಬಿ.ಎ., ಎಲ್‌ಎಲ್.ಬಿ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,

ಕಡೂರು.

ಸಿ.ಸಿ. ಸಂಖ್ಯೆ : 9/2024

ಫಿರ್ಯಾದುದಾರರು : ಸರ್ಕಾರದ ಪರವಾಗಿ,
ಸಿಂಗಟಗೆರೆ ಆರಕ್ಷಕ ಠಾಣೆ
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

- ವಿರುದ್ಧ -

ಆರೋಪಿ/ಗಳು : ಸೋಮಶೇಖರ
ಬಿನ್ ಲೇಟ್ ಮರುಳಸಿದ್ದಪ್ಪ,
ಸುಮಾರು 50 ವರ್ಷ, ವ್ಯವಸಾಯ,
ವಾಸಃ ಜನ್ನತ್ ಕಾಲೋನಿ, ಸಿಂಗಟಗೆರೆ
ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು.
(ಪ್ರತಿನಿಧಿಸುವವರು ಶ್ರೀ. ಎಸ್.ಎನ್.ಎ., ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 13.10.2023 |
| ಅಪರಾಧ ವರದಿಯಾದ ದಿನಾಂಕ | : | 16.10.2023 |
| ಫಿರ್ಯಾದುದಾರರ ಹೆಸರು | : | ಶ್ರೀ ಹರೀಶ ಎಸ್.ಎಮ್ |
| ಸಾಕ್ಷ್ಯಪ್ರಾರಂಭಿಸಿದ ದಿನಾಂಕ | : | 08.07.2026 |

KACM210046242024

| | | |
|---|---|---|
| ತೀರ್ಪಿನ ದಿನಾಂಕ | : | 01.08.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಭಾರತೀಯ ದಂಡ ಸಂಹಿತೆ, ಕಲಂ 504, 232, 324, 506 ಮತ್ತು 341 |
| ನ್ಯಾಯಾಧೀಶರ ಅಭಿಪ್ರಾಯ | : | ಭಾರತೀಯ ದಂಡ ಸಂಹಿತೆ, ಕಲಂ 504, 232, 324, 506 ಮತ್ತು 341 ರ ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರ್ದೋಷಿಯೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು, ಕಡೂರು |
| ಆರೋಪಿ ಪರವಾಗಿ | : | ಶ್ರೀ.ಎಸ್.ಎನ್.ಎ., ವಕೀಲರು |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಅವಧಿ | : | ವರ್ಷಗಳು 02, ತಿಂಗಳು 09, ದಿನಗಳು 16 |

D K MANJUNATHACHARI
Digitally signed by D K MANJUNATHACHARI
Date: 2026.08.03 17:13:15 +0530

(ಮಂಜುನಾಥ ಚಾರಿ ಡಿ.ಕೆ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಕಡೂರು.

: : ತೀರ್ಪು : :

ಸಿಂಗಟಗೆರೆ ಪೊಲೀಸರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ, ಕಲಂ 504, 232, 324, 506 ಮತ್ತು 341 ರ ರೀತ್ಯಾ ದಂಡನೀಯ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಆರೋಪಿ ವಿರುದ್ಧ ಅಭಿಯೋಜನೆಯ ಆಪಾದನೆ ಏನೆಂದರೆ :-

ದಿನಾಂಕ 13.10.2023 ರಂದು ಮಧ್ಯಾಹ್ನ 2-30 ಗಂಟೆಯ ಸಮಯದಲ್ಲಿ, ಕಡೂರು ತಾಲ್ಲೂಕು, ಸಿಂಗಟಗೆರೆ ಗ್ರಾಮದಲ್ಲಿ, ಚಾಸಾ-1 ಹರೀಶ್ ರವರ ತಂದೆಯಾದ ಮೂಡಲಗಿರಿಯಪ್ಪ ರವರ ಭಾಗಕ್ಕೆ ಒಟ್ಟು ಕುಟುಂಬದ ಜಂಟಿ ಖಾತೆಯಲ್ಲಿರುವ ಸಿಂಗಟಗೆರೆ ಗ್ರಾಮದ ಸರ್ವೆ ನಂ.237/2 ರ ಜಮೀನಿಗೆ, ಆರೋಪಿಯು ದನಗಳನ್ನು ಬಿಟ್ಟು ಮೇಯಿಸುತ್ತಿದ್ದು, ಆಗ ಚಾಸಾ-1 ರವರು ಆರೋಪಿಯ ಹತ್ತಿರ ಹೋಗಿ ಏಕೆ ರಾಗಿ ಜಮೀನಿಗೆ ದನಗಳನ್ನು ಬಿಟ್ಟು ಮೇಯಿಸಿ ಬೆಳೆ ಹಾಳು ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಆರೋಪಿಯು ಚಾಸಾ-1 ರವರಿಗೆ ಸೂಳೆ ಮಗನೆ, ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆಂದು, ಕೈಯಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು, ತೆಂಗಿನ ಮಟ್ಟೆಯಿಂದ ಚಾಸಾ-1 ರವರ ಬೆನ್ನಿಗೆ, ಮೈಕೈಗೆ ಹೂಡೆದು ನಂತರ ಮರ್ಮಾಂಗಕ್ಕೆ ಹಿಚುಕಿ ನೋವುಂಟು ಪಡಿಸಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು, ಚಾಸಾ-1 ರವರು ಆರೋಪಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಪುನಃ ಚಾಸಾ-1 ರವರನ್ನು ಅಡ್ಡಗಟ್ಟಿರುತ್ತಾರೆಂದು, ಅಲ್ಲದೆ ಚಾಸಾ-1 ರವರಿಗೆ ಇಷ್ಟಕ್ಕೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುವ ಕಾರಣ, ಆರೋಪಿಯು ಭಾರತೀಯ ದಂಡ ಸಂಹಿತೆ, ಕಲಂ 504, 232, 324, 506 ಮತ್ತು 341 ರ ಅಡಿಯಲ್ಲಿ ಅಪರಾಧಗಳನ್ನು ಎಸಗಿರುತ್ತಾರೆ ಎಂಬುದಾಗಿದೆ.

3. ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಮೇಲ್ಕಂಡ ಆರೋಪಿ ವಿರುದ್ಧ ಮೇಲ್ಕಂಡ ಕಲಂಗಳನ್ವಯ ಶಿಕ್ಷಾರ್ಹ ಕೃತ್ಯಗಳ ಬಗ್ಗೆ

KACM210046242024

ಸಂಜ್ಞೇಯತೆ ತೆಗೆದುಕೊಂಡು ಆರೋಪಿ ವಿರುದ್ಧ ಸಮನ್ಸ್ ಜಾರಿ ಮಾಡಿದಾಗ, ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನಂತರ ಆರೋಪಿಗೆ ದೋಷಾರೋಪಣಾ ಪತ್ರ ಹಾಗೂ ಅದಕ್ಕೆ ಲಗತ್ತಿಸಿರುವ ಎಲ್ಲಾ ದಾಖಲೆಗಳ ಪತ್ರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ನೀಡಲಾಗಿದೆ. ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಲಾಯಿತು. ಆರೋಪಿ ತಾನು ತಪ್ಪು ಮಾಡಿಲ್ಲ ವಿಚಾರಣೆ ಮಾಡಬೇಕೆಂದು ಮನವಿ ಮಾಡಿದ ಕಾರಣ ಪ್ರಕರಣದ ವಿಚಾರಣೆ ನಡೆಸಲಾಯಿತು.

4. ಅಭಿಯೋಜನೆಯು ಇಬ್ಬರನ್ನು ಸಾಕ್ಷಿದಾರರನ್ನು ಅವರನ್ನು ಫ್ರಾಸಾ-1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿ, 4 ದಾಖಲೆಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲೆಗಳನ್ನು ನಿಪಿ-1 ರಿಂದ 4 ಎಂದು ಗುರುತಿಸಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿಗಳಿಗೆ ಆದೇಶಿಕೆಯನ್ನು ಜಾರಿ ಮಾಡಲು ಕೋರಿದ್ದು, ಅಭಿಯೋಜನೆಯ ಪರವಾದ ಸಾಕ್ಷಿದಾರರು ಅಭಿಯೋಜನಾ ಸ್ವಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಮತ್ತು ಇದರಿಂದ ಅಭಿಯೋಜನೆಗೆ ಅನುಕೂಲವಾಗದ ಕಾರಣ ಮತ್ತು ಅಭಿಯೋಜನೆಯ ಸಾಕ್ಷ್ಯ ನೀಡುವಿಕೆಯ ಮುಕ್ತಾಯದ ನಂತರ ಆರೋಪಿಗೆ ವ್ಯತಿರಿಕ್ತವಾದ ಸಾಕ್ಷಿಗಳಿಲ್ಲದ ಕಾರಣ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿ ವಿಚಾರಣೆಯನ್ನು ಮನ್ನಾ ಮಾಡಲಾಯಿತು.

5. ಪ್ರಕರಣದ ವಿಚಾರಣೆಯ ತರುವಾಯ ಉಭಯ ಪಕ್ಷಗಾರರ ವಾದವನ್ನು ಆಲಿಸಿ ಕಡತವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ನ್ಯಾಯಾಲಯದ ನಿಣರ್ಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ ಅವುಗಳೆಂದರೆಃ-

<u>ಅಂಶಗಳು</u>

ಅಂಶ-1 : 13.10.2023 ರಂದು ಮಧ್ಯಾಹ್ನ 2-30 ಗಂಟೆ ಸಮಯದಲ್ಲಿ ಸಿಂಗಟಗೆರೆ ಪೋಲೀಸ್ ಠಾಣಾ ವ್ಯಾಪ್ತಿಯ ಸಿಂಗಟಗೆರೆ ಗ್ರಾಮದಲ್ಲಿ ಚಾಸಾ-1 ರವರ ತಂದೆ ಮೂಡ್ಲಗಿರಿಯಪ್ಪ ರವರ ಭಾಗಕ್ಕೆ ಒಟ್ಟು ಕುಟುಂಬದ ಜಂಟಿ ಖಾತೆಯಲ್ಲಿರುವ ಸಿಂಗಟಗೆರೆ ಗ್ರಾಮದ ಸರ್ವೆ ನಂ.237/2 ರ ಚಾಸಾ 1 ರವರ ಜಮೀನಿಗೆ ಆರೋಪಿಯು ದನಗಳನ್ನು ಬಿಟ್ಟು ಮೇಯಿಸುತ್ತಿದ್ದನ್ನು ಚಾಸಾ 1 ರವರು ಕೇಳಿದ್ದಕ್ಕೆ ಆರೋಪಿಯು ಚಾಸಾ-1 ರವರಿಗೆ ಸೂಳೆಮಗನೇ, ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿ ಭಾರತೀಯ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

ಅಂಶ-2 : ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು, ಕೈಯಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

ಅಂಶ-3 : ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಯು ಚಾಸಾ-1 ರವರಿಗೆ ತೆಂಗಿನ ಎಡಮಟ್ಟೆಯಿಂದ ಬೆನ್ನಿಗೆ, ಮೈಕೈಗೆ ಹೊಡೆದು ನಂತರ ಮರ್ಮಾಂಗಕ್ಕೆ ಹಿಚುಕಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 324 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

ಅಂಶ-4 : ಮೇಲೆ ಹೇಳಲಾದ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಆರೋಪಿಯು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು, ಹೊಡೆದು ನಂತರ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುವ ಕಾರಣ, ಆ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

ಅಂಶ-5 : ಹಾಗಿದ್ದರೆ ಏನು ಆದೇಶ ?

6. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆಃ-

ಅಂಶ 1- ನಕಾರಾತ್ಮಕವಾಗಿ
ಅಂಶ 2- ನಕಾರಾತ್ಮಕವಾಗಿ
ಅಂಶ 3- ನಕಾರಾತ್ಮಕವಾಗಿ

KACM210046242024

ಅಂಶ 4- ನಕಾರಾತ್ಮಕವಾಗಿ

ಅಂಶ 5- ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿಃ

: ಕಾರಣಗಳು :

7. ಅಂಶ 1 ರಿಂದ 4 :: ಈ ಮೇಲಿನ ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ ವಿಷಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

8. ದಿನಾಂಕ 13.10.2023 ರಂದು ಮಧ್ಯಾಹ್ನ 2-30 ಗಂಟೆಯ ಸಮಯದಲ್ಲಿ, ಕಡೂರು ತಾಲ್ಲೂಕು, ಸಿಂಗಟಗೆರೆ ಗ್ರಾಮದಲ್ಲಿ, ಚಾಸಾ-1 ಹರೀಶ್ ರವರ ತಂದೆಯಾದ ಮೂಡಲಗಿರಿಯಪ್ಪ ರವರ ಭಾಗಕ್ಕೆ ಒಟ್ಟು ಕುಟುಂಬದ ಜಂಟಿ ಖಾತೆಯಲ್ಲಿರುವ ಸಿಂಗಟಗೆರೆ ಗ್ರಾಮದ ಸರ್ವೆ ನಂ.237/2 ರ ಜಮೀನಿಗೆ, ಆರೋಪಿಯು ದನಗಳನ್ನು ಬಿಟ್ಟು ಮೇಯಿಸುತ್ತಿದ್ದು, ಆಗ ಚಾಸಾ-1 ರವರು ಆರೋಪಿ ಹತ್ತಿರ ಹೋಗಿ ಏಕೆ ರಾಗಿ ಜಮೀನಿಗೆ ದನಗಳನ್ನು ಬಿಟ್ಟು ಮೇಯಿಸಿ ಬೆಳೆ ಹಾಳು ಮಾಡುತ್ತೀರಾ ಎಂದು ಕೇಳಿದಕ್ಕೆ ಆರೋಪಿಯು ಚಾಸಾ-1 ರವರಿಗೆ ಸೂಳೆ ಮಗನೆ, ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆಂದು, ಕೈಯಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು, ತೆಂಗಿನ ಮಟ್ಟೆಯಿಂದ ಚಾಸಾ-1 ರವರ ಬೆನ್ನಿಗೆ, ಮೈಕೈಗೆ ಹೊಡೆದು ನಂತರ ಮರ್ಮಾಂಗಕ್ಕೆ ಹಿಚುಕಿ ನೋವುಂಟು ಪಡಿಸಿ ತೀವ್ರ ಸ್ವರೂಪದ ಗಾಯನ್ನುಂಟು ಮಾಡಿರುತ್ತಾರೆಂದು, ಚಾಸಾ-1 ರವರು ಆರೋಪಿಯಿಂದ ತಪ್ಪಿಸಿಕೊಳ್ಳಲು

KACM210046242024

ಪ್ರಯತ್ನಿಸಿದಾಗ, ಪುನಃ ಚಾಸಾ-1 ರವರನ್ನು ಅಡ್ಡಗಟ್ಟಿರುತ್ತಾರೆಂದು, ಚಾಸಾ-1 ರವರಿಗೆ ಇಷ್ಟಕ್ಕೆ ಬಿಡುವುದಿಲ್ಲವೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿರುತ್ತದೆ.

9. ಅಭಿಯೋಜನೆಯು ಆರೋಪಿಗಳ ಮೇಲಿನ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಇಬ್ಬರು ಸಾಕ್ಷಿದಾರರನ್ನು ಪ್ರಾಸಾ-1 ಮತ್ತು 2 ಎಂದು ವಿಚಾರಣೆಗೆ ಒಳಪಡಿಸಿರುತ್ತದೆ.

10. ಪ್ರಾಸಾ-1/ಚಾಸಾ-1 ರವರು ಗಾಯಾಳು ಹಾಗೂ ದೂರುದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯ ಹೇಳಿಕೆಯಲ್ಲಿ, ಆರೋಪಿ ಅವಾಚ್ಯ ಶಬ್ದದಿಂದ ಬೈದಿಲ್ಲ, ಕೈಯಿಂದ ಹಲ್ಲೆ ಮಾಡಿಲ್ಲ, ಅಲ್ಲದೆ ಚಾಸಾ-2 ರವರಿಗೆ ಕೈಯಿಂದ ತಳ್ಳಿ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆತನು ನಿಪಿ-1, ನಿಪಿ.1(ಎ) ರಲ್ಲಿರುವ ತನ್ನ ಸಹಿಯನ್ನು ಗುರುತಿಸಿದರೂ ಸಹ, ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ, ನಿಪಿ-1 ಮತ್ತು 2 ರಲ್ಲಿ ಏನು ಬರೆದಿದೆ ತನಗೆ ಓದಿ ಹೇಳಲಿಲ್ಲ ಎಂದು ಪ್ರಾಸಾ-1 ರವರು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಸುದೀರ್ಘ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರವನ್ನು ಪಡೆದಿರುವುದಿಲ್ಲ.

11. ಪ್ರಾಸಾ-2/ಚಾಸಾ-2 ರವರು ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯ ಹೇಳಿಕೆಯಲ್ಲಿ, ಆರೋಪಿ ಅವಾಚ್ಯ ಶಬ್ದದಿಂದ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ, ತನಗೆ ಈಗ ತೋರಿದ ಎಡಮಟ್ಟೆಯಿಂದ ಹಲ್ಲೆ ಮಾಡಿಲ್ಲ, ಕೈಯಿಂದ ತಳ್ಳಿ ಬೈದಿರುವುದಿಲ್ಲ

ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದು ಫ್ರಾಸಾ-2 ರವರು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಸುದೀರ್ಘ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರವನ್ನು ಪಡೆದಿರುವುದಿಲ್ಲ.

12. ಈ ಪ್ರಕರಣದಲ್ಲಿ ಫ್ರಾಸಾ-1 ದೂರುದಾರರು ಪ್ರಮುಖ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪಕ್ಷದವರು ಆರೋಪಿ ಮೇಲೆ ಮಾಡಿದ ಆಪಾದನೆಯನ್ನು ರುಜುವಾತುಪಡಿಸಲು ಅತೀ ಮುಖ್ಯ ಸಾಕ್ಷಿದಾರರಾಗಿರುತ್ತಾರೆ. ಆದರೆ ಫ್ರಾಸಾ.1 ಮತ್ತು ಫ್ರಾಸಾ-2 ರವರುಗಳು ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಫ್ರಾಸಾ.1 ಮತ್ತು 2 ರವರುಗಳ ಸಾಕ್ಷ್ಯವನ್ನು ಗಂಭೀರವಾಗಿ ಗಮನಿಸಿದಾಗ, ಫ್ರಾಸಾ.1 ಮತ್ತು 2 ರವರುಗಳ ಸಾಕ್ಷಿಯ ಅನುಪಸ್ಥಿತಿಯಲ್ಲಿ ಉಳಿದ ಸಾಕ್ಷಿದಾರರ ವಿಚಾರಣೆ ಮಾಡಿದರು ಸಹ ಅದು ಆರೋಪಿ ವಿರುದ್ಧ ಆರೋಪಿಸಲಾದ ಆರೋಪಗಳನ್ನು ಅಭಿಯೋಜನೆಯು ಸಾಬೀತುಪಡಿಸುವಲ್ಲಿ ಸಫಲರಾಗುವುದಿಲ್ಲವಾದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆಂಬ ಮನವಿಯನ್ನು ನ್ಯಾಯಾಲಯವು ತಿರಸ್ಕರಿಸಿರುತ್ತದೆ.

13. ಫ್ರಾಸಾ-1 ಮತ್ತು 2 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅವರು ನೀಡಿದ ಸಾಕ್ಷ್ಯದಂತೆ ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿ ಸಾಕ್ಷ್ಯಕ್ಕೆ ಅನುಗುಣವಾಗಿ ಫ್ರಾಸಾ-1 ಮತ್ತು 2 ರವರು ಈ ಪ್ರಕರಣದ ಪ್ರಮುಖ

ಸಾಕ್ಷಿದಾರರಾಗಿದ್ದು, ಅಭಿಯೋಜನೆಗೆ ಸಹಾಯವಾಗುವಂತಹ ಸಾಕ್ಷ್ಯ ನುಡಿದಿರುವುದಿಲ್ಲ. ಬದಲಾಗಿ ಅಭಿಯೋಜನೆ ಪ್ರಕರಣಕ್ಕೆ ವಿಭಿನ್ನವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ಆರೋಪಿಗಳ ವಿರುದ್ಧ ಮಾಡಲಾದ ಆರೋಪವು ರುಜುವಾತಾಗುವುದಿಲ್ಲ.

14. ಅಭಿಯೋಜನೆಯು ಹಾಜರುಪಡಿಸಿದಂತಹ ಸಾಕ್ಷ್ಯಗಳು ಮತ್ತು ದಾಖಲಾತಿ ಸಾಕ್ಷ್ಯವನ್ನು ಸಮಗ್ರವಾಗಿ ಗಮನಿಸಿದಾಗ ಆರೋಪಿ ವಿರುದ್ಧ ಆಪಾದನೆ ಮಾಡಲಾದ ಅಪರಾಧಗಳನ್ನು ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುವುದು ಸ್ಪಷ್ಟವಾಗುತ್ತದೆ. ಆದ ಕಾರಣ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಅಂಶ-1 ರಿಂದ 4 ಅನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

15. ಅಂಶ-5 :: ಈ ಮೇಲಿನ ಅಂಶ-1 ರಿಂದ 4 ರಲ್ಲಿ ಚರ್ಚಿಸಲಾದಂತೆ ಈ ಕೆಳಕಂಡ .....

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ದತ್ತವಾದ ಅಧಿಕಾರದಿಂದ ಆರೋಪಿ ವಿರುದ್ಧ ಮಾಡಲಾದ ಭಾರತೀಯ ದಂಡ ಸಂಹಿತೆ ಕಲಂ 504, 323, 324, 506 ರ ಅಡಿಯಲ್ಲಿನ ದಂಡನೀಯ ಅಪರಾಧಗಳ ಆರೋಪದಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವು ದಂಡ ಸಂಹಿತೆ ಕಲಂ 437(ಎ) ರ ಪ್ರಕಾರ ಆರು ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು.

KACM210046242024

ಪಿ.ಎಫ್.ಸಂಖ್ಯೆ 39/2023 ರಂತೆ ದಿನಾಂಕ 29.10.2023 (ಪಿ.ಆರ್.ಸಂಖ್ಯೆ 140/2026) ರ ಕ್ರಮ ಸಂಖ್ಯೆ1, ಬೆಲೆ ಬಾಳದ ವಸ್ತುವಾಗಿರುವ ಕಾರಣ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 01.08.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.)

D K MANJUNATHACHARI
Digitally signed by D K MANJUNATHACHARI
Date: 2026.08.03 17:13:24 +0530

(ಮಂಜುನಾಥ ಚಾರಿ ಡಿ.ಕೆ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,ಕಡೂರು.

:: ಅನುಬಂಧ ::

1) ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:

ಫ್ರಾಸಾ.1 : ಶ್ರೀ. ಹರೀಶ

ಫ್ರಾಸಾ.2 : ಶ್ರೀ. ಪ್ರಕಾಶ.

2) ಅಭಿಯೋಜನೆ ಪರ ಗುರ್ತಿಸಿದ ದಾಖಲಾತಿಗಳು :

ನಿಪಿ-1 : ದೂರಿನ ಪ್ರತಿ

ನಿಪಿ-1(ಎ) : ಸಾಕ್ಷಿಯ ಸಹಿ

ನಿಪಿ-2 : ಸ್ಥಳ ಪಂಚನಾಮೆ ಪ್ರತಿ

ನಿಪಿ-2(ಎ ಮತ್ತು ಬಿ): ಸಾಕ್ಷಿಯ ಸಹಿ

ನಿಪಿ-3 : ಫೋಟೋ

ನಿಪಿ-4 : ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ಹೇಳಿಕೆಯ ಭಾಗ.

KACM210046242024

3) ಆರೋಪಿತರ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು :- ಇರುವುದಿಲ್ಲ.

4) ಮುದ್ದೆ ಮಾಲುಗಳು :- ಇರುವುದಿಲ್ಲ.

D K MANJUNATHACHARI
Digitally signed by D K MANJUNATHACHARI
Date: 2026.08.03 17:13:32 +0530

(ಮಂಜುನಾಥ ಚಾರಿ ಡಿ.ಕೆ)
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,ಕಡೂರು.